ಅ) ಆಂಗ್ಲ ಮಾಧ್ಯಮ ನರ್ಸರಿ ಶಾಲೆಗಳನ್ನು ತೆರೆಯಲು ಯಾವ ನಿಬಂಧನೆಗಳೂ ಇಲ್ಲ ಹಾಗೂ ಅನುಮತಿಯನ್ನು ನೀಡುತ್ತಿಲ್ಲ.

ಇ) ಇಲ್ಲ.

**ಉ.ಕ.ಜಿಲ್ಲೆಯಲ್ಲಿ ಟಿ.ಸಿ.ಹೆಚ್, ಬಿ.ಎಡ್. ಕಾಲೇಜ್ ಸ್ಥಾಪನೆ.**

1243 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಟಿ.ಸಿ.ಹೆಚ್, ಬಿ.ಎಡ್.ಕಾಲೇಜು ಸ್ಥಾಪಿಸಲು ಸರ್ಕಾರದ ಸೂತ್ರಗಳೇನು?*

*ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ಟಿ.ಸಿ.ಹೆಚ್., ಬಿ.ಎಡ್. ಕಾಲೇಜು ಸ್ಥಾಪಿಸುವ ಬಗ್ಗೆ ಹೊಸದಾಗಿ ಪ್ರಸ್ತಾವನೆ ಬಂದಿದೆಯೇ?*

*ಇ) ಹಾಗಿದ್ದಲ್ಲಿ, ಕಾಲೇಜು ಸ್ಥಾಪಿಸುವ ಬಗ್ಗೆ ಸರ್ಕಾರದ ಯೋಜನೆ ಇದೆಯೇ?*

*ಈ) ಹೊಸದಾಗಿ ಸದರಿ ಕಾಲೇಜು ಸ್ಥಾಪಿಸಲು ಪಾಸಗಿಯವರಿಗೆ ನೀಡುವ ಆಲೋಚನೆ ಇದೆಯೇ?*

*ಉ) ಹಾಗಿದ್ದಲ್ಲಿ, ಅದಕ್ಕೆ ಸರ್ಕಾರದ ನಿಬಂಧನೆಗಳೇನು?*

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :

ಅ) 1987ನೇ ಸಾಲಿನಲ್ಲಿ ತಜ್ಞರ ಸಮಿತಿಯು ನೀಡಿರುವ ವರದಿಯಲ್ಲಿನ ಶಿಫಾರಸ್ಸನ್ನು ಆಧರಿಸಿ 7ನೇ ಮತ್ತು 8ನೇ ಪಂಚವಾರ್ಷಿಕ ಯೋಜನಾವಧಿಯ ಅಂತ್ಯದವರೆಗೆ ಹೊಸ ಶಿಕ್ಷಣ ಕಾಲೇಜುಗಳ ಮತ್ತು ಟಿ.ಸಿ.ಹೆಚ್. ಸಂಸ್ಥೆಗಳ ಸ್ಥಾಪನೆಯ ಮೇಲೆ ನಿಷೇಧವಿದೆ. ಅದೂ ಅಲ್ಲದೆ, 1993ರ ರಾಷ್ಟ್ರೀಯ ಶಿಕ್ಷಣ ಶಿಕ್ಷಕರ ಪರಿಷತ್ತಿನ ಅಧಿನಿಯಮದ 14ನೇ ಪ್ರಕರಣದಡಿ ಅನುಮೋದನೆ ಪಡೆಯಬೇಕು.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

**ಟಿ.ಸಿ.ಹೆಚ್, ಮತ್ತು ಬಿ.ಎಡ್, ಕಾಲೇಜುಗಳ ಸ್ಥಂಖ್ಯೆ.**

892 - ಶ್ರೀ ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿ 1996-97ನೇ ಸಾಲಿನಲ್ಲಿ ಒಟ್ಟು ಎಷ್ಟ ಟಿ.ಸಿ.ಹೆಚ್. ಕಾಲೇಜುಗಳು ಹಾಗೂ ಬಿ.ಎಡ್. ಕಾಲೇಜುಗಳು ಇವೆ.*

*ಆ) ಇವುಗಳಲ್ಲಿ ಸರ್ಕಾರಿ ಅನುದಾನ ಪಡೆಯುತ್ತಿರುವ, ಅನುದಾನ ಪಡೆಯದ ಮತ್ತು ಅಲ್ಪಸಂಖ್ಯಾತರ ಸಂಸ್ಥೆಯ ಸಂಖ್ಯೆ ಎಷ್ಟು.*

*ಇ) ಇದರಲ್ಲಿ ಶೇಕಡ ಎಷ್ಟು ಸೀಟುಗಳಿಗೆ 'ಸರ್ಕಾರವು ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು?*

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :

ಅ) ಟಿ.ಸಿ.ಹೆಚ್. ಸಂಸ್ಥೆಗಳ ಸಂಖ್ಯೆ 131

ಬಿ.ಎಡ್. ಕಾಲೇಜುಗಳ ಸಂಖ್ಯೆ 65

ಅ)

| | ಅಲ್ಪಸಂಖ್ಯಾತರ | ಇತರರು |
|---|---|---|
| | ಅನುದಾನಿತ | |
| ಟಿ.ಸಿ.ಹೆಚ್. | 09 | 33 |
| ಬಿ.ಎಡ್. | 03 | 15 |
| | ಅನುದಾನರಹಿತ | |
| ಟಿ.ಸಿ.ಹೆಚ್ | 10 | 41 |
| ಬಿ.ಎಡ್. | 03 | 44 |

ಇ)

| | ಶೇಕಡವಾರು | ಸೀಟುಗಳು | |
|---|---|---|---|
| | **ಅಲ್ಪಸಂಖ್ಯಾತರು** | | **ಇತರರು** |
| | **ಅನುದಾನಿತ** | | |
| ಟಿಸಿಹೆಚ್/ಬಿ.ಎಡ್ | ಶೇಕಡ 65 | ಶೇಕಡ | 75 |
| | **ಅನುದಾನ ರಹಿತ** | | |
| ಟಿಸಿಹೆಚ್/ಬಿ.ಎಡ್ | ಶೇಕಡ 50 | ಶೇಕಡ | 50 |

**ಕುಡಿಯುವ ನೀರಿನ ಯೋಜನೆಗೆ ಅಭಾವ ಪರಿಹಾರ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಮೊತ್ತ.**

624 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕುಡಿಯುವ ನೀರಿನ ಯೋಜನೆಗೆ ಕೇಂದ್ರ ಸರ್ಕಾರವು ಹಾಗೂ ರಾಜ್ಯ ಸರ್ಕಾರವು ಬಿಡುಗಡೆ ಮಾಡಿರುವ ಹಣವೆಷ್ಟು?*

*ಆ) ಮೇ 1996ರ ಅಂತ್ಯದವರೆಗೆ ಕುಡಿಯುವ ನೀರಿಗಾಗಿ ಜಿಲ್ಲಾ ಪಂಚಾಯತ್‌ಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಸರ್ಕಾರವು ಬಿಡುಗಡೆ ಮಾಡಿರುವ ಹಣವೆಷ್ಟು?*

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) 1996-97ನೇ ಸಾಲಿನಲ್ಲಿ ಕುಡಿಯುವ ನೀರಿನ ಯೋಜನೆಗಳಿಗಾಗಿ ಒದಗಿಸಲಾದ ಹಾಗೂ ಬಿಡುಗಡೆ ಮಾಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ.

| ವಲಯ್ಕ | ಒದಗಿಸಲಾದ ಅನುದಾನ (ರೂ. ಲಕ್ಷಗಳಲ್ಲಿ) | ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|
| ಕೇಂದ್ರ | 6087.00 | 2029.00 |
| ರಾಜ್ಯ | 6572.67 | 2003.29 |